**ಎಸ್ ಸಿ ನಂ.118/2019 ಪಿಡಬ್ಲ್ಯೂ 10**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 08.01.2026**

**ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ವಿ ಎಸ್ ಭಟ್ ವಕೀಲರಿಂದಃ**

1. ಎಸ್ ಸಿ ನಂ.82/2017 ರಲ್ಲಿ ನಾನು 7 ನೇ ಆರೋಪಿ ಎಂದರೆ ಸರಿ. ನನ್ನನ್ನು ಆ ಪ್ರಕರಣದ ತನಿಖಾಧಿಕಾರಿ ಕೆ.ಆರ್.ಪ್ರಸಾದ್ ರವರು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು ಎಂದರೆ ಸಾಕ್ಷಿ ನನ್ನನ್ನು, ಯೋಗರಾಜು ಮತ್ತು ಸ್ವಾಮಿಯವರನ್ನು ದಿನಾಂಕ 29.12.2016 ರಂದು ಕೆ.ಆರ್.ಪ್ರಸಾದ್ ಮತ್ತು ಡಿ ವೈ ಎಸ್ ಪಿ ಥಾಮಸ್ ರವರು ಗೆಜ್ಜಲಗೆರೆ ಬಳಿ ಇರುವ A2B ಹೊಟೇಲ್ ಬಳಿ ಬಂಧಿಸಿದ್ದಾರೆಂದು ನುಡಿಯುತ್ತಾರೆ. ನಾನು ಆ ಪ್ರಕರಣದಲ್ಲಿ ಬಂಧಿಸಿದ ಬಳಿಕ ಅರಳೀಕಟ್ಟೆಯ ಬಳಿ ಘಟನೆ ಹೇಗೆ ನಡೆಯಿತು ಎಂದು ಹೇಳಿದ್ದೇನೆ. ನಾನು ಬಂಧಿತನಾದ ಬಳಿಕ ಮೂರು ತಿಂಗಳ ನಂತರ ಬಿಡುಗಡೆಯಾಗಿ ಬಂದಿದ್ದೇನೆ. ದಿನಾಂಕ 24.08.2017 ರಂದು ಸಿಐಡಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ, ಆದರೆ ಮದ್ದೂರು ಐಬಿಯಲ್ಲಿ ವಿಚಾರಣೆ ಮಾಡಿದ್ದಾರೆಂದು ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಪ್ಯಾರಾ 1 ರ ಕೊನೆಯ ನಾಲ್ಕು ಸಾಲುಗಳು, ಪ್ಯಾರಾ 3 ರ 2 ನೇ ಸಾಲಿನಿಂದ 7 ನೇ ಸಾಲಿನಲ್ಲಿ ಹೇಳಿದ "ಅಲ್ಲಿ ಮುತ್ತ ನಿಂತಿದ್ದ," ಮತ್ತು ಅದೇ ಪ್ಯಾರಾದಲ್ಲಿ ಹೇಳಿದ “ನಾವು ತೋಟದ ಮನೆಗೆ ಹೋಗುತ್ತಿರುವಾಗ ................ ಚನ್ನೇಗೌಡ ಅಡ್ಡ ಹಾಕಿದ” ಮತ್ತು ಅದೇ ಪ್ಯಾರಾದಲ್ಲಿ ಹೇಳಿದ "ಆಗ ಚಾಸಾ.5 ಮಹೇಂದ್ರನಿಗೆ ಯಾರನ್ನೂ ಉಳಿಸಬೇಡಿ ಎಂದು ಹೇಳಿದ” ಮತ್ತು ಅದೇ ಪ್ಯಾರಾದ "ನಾನು ಭಯದಿಂದ ಅಲ್ಲಿಂದ ಓಡಿ ಹೋದೆ” ಎಂಬ ಅಂಶವನ್ನು ತನಿಖೆಯ ಕಾಲದಲ್ಲಿ ನಾನು ತನಿಖಾಧಿಕಾರಿ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ 1 ನೇ ಆರೋಪಿ ಕೈಯಲ್ಲಿ ಮಚ್ಚು, 2 ನೇ ಆರೋಪಿ ಕೈಯಲ್ಲಿ ಚೂರಿ ಇತ್ತು ಮತ್ತು ಅದರಿಂದ ಅವರು ನಮ್ಮ ಮೇಲೆ ಹಲ್ಲೆ ಮಾಡಿದರು ಎಂಬ ಅಂಶವನ್ನು ನಾನು ತನಿಖಾಧಿಕಾರಿ ಮಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರಸನ್ನ, ನಾನು, ಮುತ್ತುರಾಜು ಮತ್ತು ಇತರರು ಎಸ್.ಸಿ.82/2017 ರಲ್ಲಿ ಆರೋಪಿಗಳು ಎಂದರೆ ಸರಿ. ನಾನು ಮತ್ತು ಪ್ರಸನ್ನ ಎಸ್.ಸಿ.ನಂ.65/2019 ರ ಪ್ರಕಾಶ್ ಕೊಲೆ ಪ್ರಕರಣದಲ್ಲಿ ಕೂಡ ಆರೋಪಿಗಳು

ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದು ಅಲ್ಲ. ದಿನಾಂಕ 29.12.2016 ರಂದು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಡುವ ವೇಳೆಯಲ್ಲಿ ನಾನು, ಸ್ವಾಮಿ, ಟಿ.ಎಸ್.ಮುತ್ತುರಾಜು, ರಾಮಲಿಂಗು, ಜಗದೀಶ ಮತ್ತು ಇತರರು ಕೈಗಳಲ್ಲಿ ಮರಣಾಂತಿಕ ಆಯುಧಗಳನ್ನು ಹಿಡಿದುಕೊಂಡು ಹೋಗಿ ಪ್ರಸನ್ನನ ಮೇಲೆ ಗಲಾಟೆ ಮಾಡಿದ ವಿಷಯವನ್ನು ಎತ್ತಿ, ಅರಳೀಕಟ್ಟೆಯ ಬಳಿ ನಿರಾಯುಧರಾಗಿ ಕುಳಿತಿದ್ದ ಈ ಪ್ರಕರಣದ ಆರೋಪಿಗಳ ಮೇಲೆ ಹಲ್ಲೆ, ಮಾಡಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದೇವೆಂದರೆ ಸರಿಯಲ್ಲ. ಆ ಹೇಳಿಕೆಯಲ್ಲಿ 1 ನೇ ಆರೋಪಿ ಕೈಯಲ್ಲಿ ಮಚ್ಚು ಇತ್ತು, 2 ನೇ ಆರೋಪಿ ಕೈಯಲ್ಲಿ ಚೂರಿ ಇತ್ತು ಎಂದು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ನೀಡಿದ ದಿನಾಂಕ 28.04.2017 ರ ತನಿಖಾಧಿಕಾರಿ ಮುಂದೆ ನೀಡಿದ ಹೇಳಿಕೆಯಲ್ಲಿ ಕೂಡ ಈ ಪ್ರಕರಣದ 1 ಮತ್ತು 2 ನೇ ಆರೋಪಿಗಳು ಮಚ್ಚು ಮತ್ತು ಚೂರಿ ಹಿಡಿದುಕೊಂಡು ಹಲ್ಲೆ ಮಾಡಿದ್ದಾರೆಂದು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಚಿಕಿತ್ಸೆ ಪಡೆದಿಲ್ಲ. ನಾನು ಮತ್ತು ಎಸ್.ಸಿ.82/2017 ರ ಆರೋಪಿಗಳು ಕೈಗಳಲ್ಲಿ ಮಾರಣಾಂತಿಕ ಆಯುಧಗಳನ್ನು ಹಿಡಿದುಕೊಂಡು ಹೋಗಿ ನಿರಾಯುಧರಾಗಿ ಅರಳೀಕಟ್ಟೆಯ ಮೇಲೆ ಕುಳಿತಿದ್ದ ಈ ಪ್ರಕರಣದ ಆರೋಪಿಗಳ ಮೇಲೆ ಆಕ್ರಮಣ ಮಾಡಿ ಇಬ್ಬರ ಸಾವಿಗೆ ಕಾರಣರಾಗಿ ಇನ್ನಿಬ್ಬರಿಗೆ ಮಾರಣಾಂತಿಕ ಹಲ್ಲೆ ಮಾಡಿದ್ದೇವೆಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರ ಚಾಸಾ.1 ಹಣ ಮತ್ತು ರಾಜಕೀಯ ಪ್ರಭಾವ ಬೀರಿ, ನಮ್ಮ ಮೇಲಿನ ಪ್ರಕರಣದಿಂದ ಹೊರಬರಲು ಈ ಆರೋಪಿಗಳ ಮೇಲೆ ಸುಳ್ಳು ಸಾಕ್ಷಿದಾರಾರರನ್ನು ಸೃಷ್ಟಿಸಿ, ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಲು ಕಾರಣರಾಗಿದ್ದೇವೆಂದರೆ ಸರಿಯಲ್ಲ. ನಾನು ಎಸ್ ಸಿ ನಂ.82/2017 ರಲ್ಲಿ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗಳೇ ಸತ್ಯಾಂಶದಿಂದ ಕೂಡಿವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ *5* ಮತ್ತು *7* ರಿಂದ *14* ನೇ ಆರೋಪಿತರ ಪರ ಶ್ರೀ ಪಿ ಎನ್ ಕೆ ವಕೀಲರಿಂದಃ**

ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.